2016 ಕ.ತೀ.ವ 150

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀಮತಿ ಕಸ್ತೂರಿಬಾಯಿ @ ಲಕ್ಕವ್ವ –ವಿರುದ್ಧ– ಶ್ರೀ ಸುಭಾಷ್ @ ಸುಭಾಷ್ ರೆಡ್ಡಿ ಮತ್ತು ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ಎದುರುದಾರರು ಹೂಡಿದ್ದ ದಾವೆಯಲ್ಲಿ ರಿಟ್ ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 6 ಕ್ರಮಾದೇಶ 17ರಡಿಯಲ್ಲಿ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ರಿಟ್ ಅರ್ಜಿದಾರರು ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 6 ಕ್ರಮಾದೇಶ 17ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಉಚ್ಚ ನ್ಯಾಯಾಲಯವು, ಅರ್ಜಿದಾರರು ಪ್ರತಿವಾದ ಪತ್ರದಲ್ಲಿ ಅಂಗೀಕರಿಸಿದ ಅಂಶವನ್ನು ಅಲ್ಲಗಳೆಯುವ ಸಲುವಾಗಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ಅದು ಹೊಸ ವಿಷಯವನ್ನು ಪರಿಚಯ ಮಾಡಲ್ಪಡುತ್ತದೆಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

*1. ಎಐಆರ್ 1988 ಎಸ್.ಸಿ.680*
*ಮೋದಿ ಸ್ಪಿನಿಂಗ್ ಅಂಡ್ ವೀವಿಂಗ್ ಮಿಲ್ಸ್, ಕಂ.ಲಿ.,*
*–ವಿರುದ್ಧ– ಲಧಾ ರಾಮ್ ಮತ್ತು ಕಂಪನಿ (ಉಲ್ಲೇ) 13*

*ರಿಟ್ ಅರ್ಜಿ ಸಂ. 100903/2015 (ಜಿಎಂ–ಸಿಪಿಸಿ), ದಿನಾಂಕ: 24ನೇ ಮಾರ್ಚ್, 2015.

*2. ಎಐಆರ್ 1998 ಎಸ್.ಸಿ.618*
*ಹಿರಾಲಾಲ್ -ವಿರುದ್ಧ- ಕಯಾಲನ್ ಮಾಲ್*
*ಮತ್ತು ಇತರರು (ಉಲ್ಲೇ) 14*

*3. (2000) 1 ಎಸ್‌ಸಿಸಿ 712*
*ಬಿ.ಕೆ. ನಾರಾಯಣ ಪಿಳ್ಳೈ -ವಿರುದ್ಧ-*
*ಪರಮೇಶ್ವರಣ್ ಪಿಳ್ಳೈ ಮತ್ತು ಇನ್ನೊಬ್ಬರು (ಉಲ್ಲೇ) 14*

ಅರ್ಜಿದಾರರ ಪರ : ಶ್ರೀ ಪಿ. ಹೆಚ್. ಗೋಡ್ಬಿಂಡಿ, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಎನ್.ಎಲ್. ಬಟಕುರ್ಕಿ, ವಕೀಲರು.
2 ಮತ್ತು 3ನೇ ಪ್ರತ್ಯರ್ಜಿದಾರರಿಗೆ ನೋಟೀಸ್ ಜಾರಿ ಮಾಡಿದೆ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ಮೇಲಿನ ರಿಟ್ ಅರ್ಜಿಯನ್ನು, ಲಿಖಿತ ಹೇಳಿಕೆಯ ತಿದ್ದುಪಡಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಿದ ಕ್ರಮಾದೇಶ 6 ನಿಯಮ 17ರಡಿಯಲ್ಲಿ ಸಲ್ಲಿಸಿದ ಆತನ ಅರ್ಜಿಯನ್ನು ತಿರಸ್ಕರಿಸಿ, ಐ.ಎ.10 ಅನ್ನು ಹೊರಡಿಸಿದ 7.1.2015 ದಿನಾಂಕದ ಆದೇಶವನ್ನು ಪ್ರಶ್ನಿಸಿ ಒ.ಎಸ್.45/2011ರಲ್ಲಿ 1ನೇ ಪ್ರತ್ಯರ್ಜಿದಾರನಾಗಿರುವ ಅರ್ಜಿದಾರನು ಸಲ್ಲಿಸಿರುತ್ತಾನೆ.

2. ವಾದಿಯಾಗಿರುವ 1ನೇ ಪ್ರತ್ಯರ್ಜಿದಾರನು, 3 ಮತ್ತು 4ನೇ ಪ್ರತ್ಯರ್ಜಿದಾರರು, ಮೃತ ಸಿದ್ದಪ್ಪ ರಾಮಪ್ಪ ಸತರದ್ದಿ ಮತ್ತು ಶ್ರೀಮತಿ ಸುಶೀಲವ್ವ ಕೋಂ/ ಸಿದ್ದಪ್ಪ ಸತರದ್ಧಿಯವರ ಕಾನೂನುಬದ್ಧ ವಾರಸುದಾರರಾಗಿರುವ ಬಲದಿಂದ ದಾವಾ ಅನುಸೂಚಿತ ಸ್ವತ್ತಿನ ಮಾಲೀಕರಾಗಿರುತ್ತಾರೆಂಬ ಘೋಷಣೆಗೆ ಸಂಬಂಧಿಸಿದಂತೆ ಮತ್ತು ವಾದಿ ಹಾಗೂ 3 ಮತ್ತು 4ನೇ ಪ್ರತಿವಾದಿಗಳು ದಾವಾ ಅನುಸೂಚಿತ

ಸ್ವತ್ತುಗಳ ಶಾಂತಿಯುತ ಕಬ್ಜೆ ಮತ್ತು ಅಧಿಭೋಗದೊಂದಿಗೆ ಮಧ್ಯೆ ಪ್ರವೇಶಿಸುವುದರಿಂದ 1 ಮತ್ತು 2ನೇ ಪ್ರತಿವಾದಿಗಳನ್ನು ನಿಗ್ರಹಿಸಲು ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ ಒ.ಎಸ್.ಸಂ.45/2011ನ್ನು ಸಲ್ಲಿಸಿರುತ್ತಾನೆ. ವಾದಿಯು 4ನೇ ಪ್ರತ್ಯರ್ಜಿದಾರನ ಸಹೋದರನಾಗಿರುತ್ತಾನೆಂದು ಮತ್ತು 3ನೇ ಪ್ರತಿವಾದಿಯು ವಾದಿಯ ಮತ್ತು 4ನೇ ಪ್ರತಿವಾದಿಯ ತಾಯಿಯೆಂದೂ ವಾದಿಸಲಾಗಿದ್ದು, ವಾದಪತ್ರದ 2ನೇ ಪ್ಯಾರಾದಲ್ಲಿ ಅದನ್ನು ಪುಷ್ಠೀಕರಿಸುವ ಅಂಶವನ್ನು ಹಾಜರುಪಡಿಸಿದ್ದು, ಅದು ಈ ಮುಂದಿನಂತಿರುತ್ತದೆ:

ಸಿದ್ದಪ್ಪ ರಾಮಪ್ಪ ಸತರದ್ಧಿ (25.5.2008ರಂದು ಮೃತನಾಗಿರುತ್ತಾನೆ)

| | |
|---|---|
| ಶ್ರೀಮತಿ ಸುಶೀಲವ್ವ @ ಸುಶೀಲ (ಮೊದಲ ಪತ್ನಿ) (27.11.2010ರಂದು ಮೃತರಾಗಿರುತ್ತಾಳೆ) | ಶ್ರೀಮತಿ ಗಂಗವ್ವ (ಎರಡನೇ ಪತ್ನಿ) (ಪ್ರತಿವಾದಿ ಸಂ.3) |
| ಯಾವುದೇ ವಿವಾದಗಳಿರುವುದಿಲ್ಲ | ಸುಭಾಷ್ (ವಾದಿ)<br>ಶ್ರೀದೇವಿ (4ನೇ ಪ್ರತಿವಾದಿ.) |

ಪ್ರಸ್ತುತ ಅರ್ಜಿದಾರ/ಪ್ರತಿವಾದಿ–1 22.08.2011ರಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಮತ್ತು ವಾದಪತ್ರದ 2ನೇ ಪ್ಯಾರಾದಲ್ಲಿ ಹೇಳಿರುವ ಸ್ಪಷ್ಠೀಕರಣವನ್ನು ಒಪ್ಪಿಕೊಳ್ಳಲಾಗಿರುತ್ತದೆ. ಪ್ರತಿವಾದಿ ಸಂಖ್ಯೆ 2 ರವರೂ ಸಹ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಮತ್ತು 3 ಮತ್ತು 4ನೇ ಪ್ರತಿವಾದಿಗಳು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ವಾದ – ವಿವಾದಗಳು ಪೂರ್ಣಗೊಂಡ ತರುವಾಯ, ವಿಷಯವನ್ನು ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ನಿಯೋಜಿಸಿಕೊಳ್ಳಲಾಗಿರುತ್ತದೆ. ವಾದಿಯು 22.05.2012ರಂದು ಪಿ.ಡಬ್ಲ್ಯು 1ರ ಅಫಿಡಾವಿಟ್ ಸಾಕ್ಷ್ಯವನ್ನು ಸಲ್ಲಿಸಲಾಗಿರುತ್ತದೆ ಮತ್ತು ವಿಷಯವನ್ನು ಪಿ.ಡಬ್ಲ್ಯು 1ರ ಪಾಟೀ ಸವಾಲಿಗೆ ಸಂಬಂಧಿಸಿದಂತೆ ನಿಯೋಜಿಸಲಾಗಿರುತ್ತದೆ. ಆ ಹಂತದಲ್ಲಿ, ಶ್ರೀಮತಿ ಸುಶೀಲವ್ವ @ ಸುಶೀಲ

ಮಾತ್ರವೇ ರಾಮಪ್ಪ ಸತರದ್ಧಿಯ ಮಗ ಸಿದ್ದಪ್ಪನ ಕಾನೂನು ಸಮ್ಮತ ಪತ್ನಿಯಾಗಿರುತ್ತಾಳೆ ಮತ್ತು ಸಿದ್ದಪ್ಪ ಸತರದ್ಧಿ ಮತ್ತು ಗಂಗವ್ವರ ನಡುವೆ ಮದುವೆ ನಡೆದ ಯಾವ ಸಂದರ್ಭಗಳೂ ಇರುವುದಿಲ್ಲವೆಂದು ಮುಂತಾಗಿ, ಹೇಳುತ್ತಾ 11ನೇ ಮತ್ತು 12ನೇ ಪ್ಯಾರಾಗಳ ನಡುವೆ 11(ಎ) ಪ್ಯಾರಾವನ್ನು ಸೇರಿಸುವ ಲಿಖಿತ ಹೇಳಿಕೆಯನ್ನು ತಿದ್ದುಪಡಿ ಮಾಡಲು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ 17ನೇ ನಿಯಮದ VI ಆದೇಶದಡಿಯಲ್ಲಿ 1ನೇ ಪ್ರತಿವಾದಿಯು ಅರ್ಜಿಯನ್ನು ಸಲ್ಲಿಸಿರುತ್ತಾರೆ. ತಿದ್ದುಪಡಿ ಅರ್ಜಿಗೆ ವಿವರವಾದ ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ವಾದಿಯು ಸದರಿ ಅರ್ಜಿಯನ್ನು ಪ್ರತಿರೋಧಿಸಿರುತ್ತಾರೆ.

ಇಡೀ ವಿಷಯವನ್ನು ಪರಿಗಣಿಸಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿ ಸಂಖ್ಯೆ 1 ತಾನು ಮಾಡಿರುವ ನಿವೇದನೆಯನ್ನು ಹಿಂತೆಗೆದುಕೊಳ್ಳುವ ಉದ್ದೇಶದೊಂದಿಗೆ ಆಕೆ ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿರುತ್ತಾಳೆ ಮತ್ತು ಇದನ್ನು ಒಪ್ಪಿಕೊಳ್ಳಲು / ಅಂಗೀಕರಿಸಲು ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಐ.ಎ.10ನ್ನು ತಿರಸ್ಕರಿಸಿ 7.1.2015ರಂದು ಪ್ರಶ್ನಿತ ಆದೇಶವನ್ನು ಹೊರಡಿಸಿರುತ್ತದೆ.

3. ಸದರಿ ಆದೇಶಕ್ಕೆ ವಿರುದ್ಧವಾಗಿ, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

4. ನಾನು ಉಭಯ ಪಕ್ಷಕಾರರ ವಾದ ವಿವಾದಗಳನ್ನು ಆಲಿಸಿರುತ್ತೇನೆ.

5. ಶ್ರೀ ಪಿ.ಹೆಚ್. ಗೋಡ್ಕಿಂಡಿ, ಅರ್ಜಿದಾರರ ಪರ ಮಾನ್ಯ ವಕೀಲರು, ಮಾನ್ಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ಆದೇಶವು ಕಾನೂನು ಬಾಹಿರವೆಂದು ತುಂಬಾ ಗಂಭೀರವಾಗಿ ವಾದಿಸಿರುವುದು, ಮಾತ್ರವಲ್ಲದೆ, ಕಂಡಿಕೆ 11 (ಎ)ಯನ್ನು ಸೇರಿಸುವ ಲಿಖಿತ ಹೇಳಿಕೆಯ ತಿದ್ದುಪಡಿಯ ಮೂಲಕ, ಪ್ರತಿವಾದಿ ಸಂಖ್ಯೆ 1 ಪ್ರಕರಣದ ಸ್ಪಷ್ಟ ವಾಸ್ತವಾಂಶಗಳನ್ನು ಹೇಳಲು ಬಯಸಿದ್ದು ತಿದ್ದುಪಡಿಯು, ವಾದಿಯ ಪ್ರಕರಣಕ್ಕೆ ಯಾವುದೇ ರೀತಿಯಲ್ಲೂ ಪೂರ್ವಾಗ್ರಹ ಪೀಡಿತವಾಗಲೀ

ಇಲ್ಲವೇ ಹೊಸ ಪ್ರಕರಣವನ್ನು ಪರಿಚಯಿಸಿದ್ದಾಗಲೀ, ಆಗಿರದೆ, ಇದು ಪಾಟೀ ಸವಾಲಿಗೆ ಸಂಬಂಧಿಸಿದಂತೆ ಪ್ರಕರಣದ ಸರಿಯಾದ ವಾಸ್ತವಾಂಶಗಳನ್ನು ಹೊಂದಿರಬೇಕಾಗಿರುತ್ತದೆಂದೂ ಹೇಳಲಾಗಿರುತ್ತದೆ. ಆದ್ದರಿಂದ, ಈತ ಮಾನ್ಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ ಪ್ರಶ್ನಿತ ಆದೇಶವನ್ನು ರದ್ದುಪಡಿಸಲು ಕೋರಿರುತ್ತಾರೆ.

6. 1ನೇ ಪ್ರತ್ಯರ್ಜಿದಾರ/ವಾದಿಯ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎನ್.ಎಲ್. ಬಟಕುರ್ಕಿ, ಪ್ರಶ್ನಿತ ಆದೇಶವನ್ನು ಊರ್ಜಿತಗೊಳಿಸಲು ಕೋರಿರುತ್ತಾರೆ.

7. ನಾನು ಉಭಯ ಪಕ್ಷಕಾರರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಅತ್ಯಂತ ಕಾಳಜಿಯಿಂದ ಆಲಿಸಿದ್ದು, ದಾಖಲೆಯಲ್ಲಿರುವ ಎಲ್ಲ ವಿಷಯವನ್ನು ಪರಿಶೀಲಿಸಿರುತ್ತೇನೆ.

8. ಪರಿಗಣಿಸಬೇಕಾಗಿರುವ ಒಂದೇ ಅಂಶವೆಂದರೆ, 1ನೇ ಪ್ರತ್ಯರ್ಜಿದಾರನು ಕೋರಿದ ಪ್ರಸ್ತಾಪಿತ ತಿದ್ದುಪಡಿಯು ಹೊಸ ಪ್ರಕರಣಕ್ಕೆ ದಾರಿ ಮಾಡಿಕೊಡುವಂತಿದೆಯೆ ಅಥವಾ ಪ್ರತ್ಯರ್ಜಿದಾರ ಸಂಖ್ಯೆ 1 ರವರು ಮಾಡಿದ ಲಿಖಿತ ಹೇಳಿಕೆಯಲ್ಲಿ ಮಾಡಿರುವ ಮೊದಲಿನ ನಿವೇದನೆಗಳನ್ನು ಹಿಂದಕ್ಕೆ ಪಡೆಯುತ್ತದೆಯೆ?

9. ಮೂಲ ವಾದವನ್ನು ಪರಿಗಣಿಸಿದ ತರುವಾಯ, ಪ್ರತಿವಾದಿಯು ಹೂಡಿದ ಪ್ರತಿವಾದ ಮತ್ತು ಕೋರಿದ ತಿದ್ದುಪಡಿಯು, ಪ್ರತಿವಾದಿ – 1, ತಿದ್ದುಪಡಿಯ ರೂಪದಲ್ಲಿ, ಸಂಬಂಧವನ್ನು ಒಳಗೊಂಡಂತೆ ಮೂಲ ಲಿಖಿತ ಹೇಳಿಕೆಯಲ್ಲಿ ಮಾಡಿದ ಕೆಲವು ಒಪ್ಪಿಗೆಗಳನ್ನು ಹಿಂದಕ್ಕೆ ಪಡೆಯಲು ಬಯಸುತ್ತಾರೆಂಬುದನ್ನು ಮತ್ತು ಇದು ಪ್ರತಿವಾದಿ–1 ರವರು ಒಂದು ಹೊಸ ಪ್ರಕರಣ ವಾದ/ಪ್ರತಿವಾದವನ್ನು ಹೂಡಿರುತ್ತಾರಲ್ಲದೆ ಬೇರಲ್ಲ ಎಂಬುದಾಗಿರುತ್ತದೆಂಬುದು ಸ್ಪಷ್ಟವಾಗಿರುತ್ತದೆ. ಮೂಲ ಲಿಖಿತ ಹೇಳಿಕೆಯಲ್ಲಿ, ಮೃತ ಸಿದ್ದಪ್ಪ ಸತರದ್ದಿ ಮತ್ತು ಪ್ರತಿವಾದಿ – 3

ಗಂಗವ್ವ, ವಾದಿ ಮತ್ತು 4ನೇ ಪ್ರತಿವಾದಿಗಳ ನಡುವಿನ ಸಂಬಂಧವನ್ನು ಒಪ್ಪಿಕೊಳ್ಳಲಾಗಿರುತ್ತದೆ. ಪ್ರಸ್ತುತ, ತಿದ್ದುಪಡಿಯ ರೂಪದಲ್ಲಿ, 1ನೇ ಪ್ರತಿವಾದಿಯು, ಪ್ರತಿವಾದಿ ಸಂಖ್ಯೆ 3 ವಾದಿ ಮತ್ತು ಪ್ರತಿವಾದಿ ಸಂಖ್ಯೆ 4 ರವರುಗಳು ಸಿದ್ದಪ್ಪ ಸತರದ್ದಿಯವರ ಕುಟುಂಬಕ್ಕೆ ಸೇರಿದವರಲ್ಲವೆಂಬ ವಾದವನ್ನು ಬಯಸುತ್ತಾರೆ.

10. ವಾದಿ, ಪ್ರತಿವಾದಿ 3 ಮತ್ತು 4 ರವರುಗಳು ಮೃತ ಸಿದ್ದಪ್ಪ S/o ರಾಮಪ್ಪ ಸತರದ್ದಿರವರ ವಾರಸುದಾರರಾಗಿದ್ದು, ದಾವಾ ಅನುಸೂಚಿತ ಸ್ವತ್ತಿನ ನಿರುಪಾಧಿಕ ಮಾಲೀಕರಾಗಿರುತ್ತಾರೆಂದು ಘೋಷಿಸುವ ಘೋಷಣೆಗೆ ಸಂಬಂಧಿಸಿದಂತೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗೆ ಸಂಬಂಧಿಸಿದಂತೆ 1ನೇ ಪ್ರತ್ಯರ್ಜಿದಾರ/ವಾದಿಯು ದಾವೆ ಸಲ್ಲಿಸಿರುತ್ತಾನೆಂಬ ವಾಸ್ತವಾಂಶವನ್ನು ಒಪ್ಪಿಕೊಳ್ಳಲಾಗಿದೆ. ಲಿಖಿತ ಹೇಳಿಕೆಯ 2ನೇ ಪ್ಯಾರಾದಲ್ಲಿ 1ನೇ ಪ್ರತ್ಯರ್ಜಿದಾರನು ಒಪ್ಪಿಕೊಂಡಿರುವ ವಂಶಾವಳಿಯು ಈ ಮುಂದಿನಂತಿರುತ್ತದೆ:

> "2) ವಾದಪತ್ರದ ಕಂಡಿಕೆ 2 ರಲ್ಲಿ ನಿರೂಪಿಸಲಾಗಿರುವ ವಂಶಾವಳಿಯು ಸರಿಯಾದುದಾಗಿರುತ್ತದೆ. ಆದರೆ ಅನುಸೂಚಿ–ಎ ಯಲ್ಲಿ ತೋರಿಸಿರುವ ದಾವ ಸ್ವತ್ತುಗಳ ವಿವರಣೆಯು ಕಾನೂನಿಗನುಸಾರವಾಗಿರುತ್ತದೆ ಮತ್ತು ಇದನ್ನು ಸದರಿ ಪ್ರತಿವಾದಿಯು ಸಂಪೂರ್ಣವಾಗಿ ನಿರಾಕರಿಸಿರುತ್ತಾರೆ".

ಲಿಖಿತ ಹೇಳಿಕೆಯ 3ನೇ ಪ್ಯಾರಾದಲ್ಲಿ, 1ನೇ ಪ್ರತ್ಯರ್ಜಿದಾರನು ಈ ಮುಂದಿನಂತೆ ಹೇಳಿರುತ್ತಾನೆ:

> "ಸದರಿ ಸಿದ್ದಪ್ಪ ಪ್ರತಿವಾದಿ ಸಂಖ್ಯೆ. 3 ನ್ನು ಎರಡನೇ ಪತ್ನಿಯಾಗಿ ಮದುವೆಯಾಗಿದ್ದು, ವಾದಿ ಮತ್ತು ಪ್ರತಿವಾದಿ–4 ಅವಳ ಮಕ್ಕಳಾಗಿರುತ್ತಾರೆ".

1ನೇ ಪ್ರತ್ಯರ್ಜಿದಾರಳೂ, ತಾನು ಈಗಾಗಲೇ ಸಲ್ಲಿಸಿದ್ದ ಲಿಖಿತ ಹೇಳಿಕೆಯನ್ನು ತಿದ್ದುಪಡಿ ಮಾಡಲು 21.7.2014ರಂದು ಒಂದು

ತಿದ್ದುಪಡಿ ಅರ್ಜಿಯನ್ನು ಸಲ್ಲಿಸಿದ್ದೂ, ಅದರಲ್ಲಿನ ಕಂಡಿಕೆ ಸಂ.11 ಮತ್ತು 12ರ ನಡುವೆ ಕಂಡಿಕೆ 11(ಎ)ಯನ್ನು ಸೇರಿಸಲು ಅನುಮತಿಯನ್ನು ಕೋರಿರುತ್ತಾರೆ, ಅದು ಈ ಮುಂದಿನಂತಿರುತ್ತದೆ:

"11.ಎ. ಶ್ರೀಮತಿ ಸುಶೀಲವ್ವ @ ಸುಶೀಲ ಎಂಬುವವರು ಮಾತ್ರವೇ ಸಿದ್ದಪ್ಪ S/o ರಾಮಪ್ಪ ಸತರದ್ಧಿಯವರ ಕಾನೂನುಬದ್ಧವಾಗಿ ವಿವಾಹವಾದ ಪತ್ನಿಯಾಗಿರುತ್ತಾರೆ. ಮೃತ ಗಂಗವ್ವ ಪ್ರತ್ಯರ್ಜಿದಾರ ಸಂಖ್ಯೆ3 ವಾದಿಯ ತಾಯಿಯಾಗಿರುತ್ತಾಳೆ ಮತ್ತು ಪ್ರತಿವಾದಿ ಸಂಖ್ಯೆ 4 ಶ್ರೀದೇವಿ ಸಿದ್ಧಪ್ಪ ರಾಮಪ್ಪ ಸತರದ್ಧಿಯ 2ನೇ ಪತ್ನಿಯಾಗಿರುವುದಿಲ್ಲ. ಗಂಗವ್ವಳ ಮದುವೆಯು ಬೆಳಗಾಂ ಜಿಲ್ಲೆಯ ಸವದತ್ತಿ ತಾಲೂಕಿನ ಕಗ್ದಾಲ್ ಗ್ರಾಮದ ವೆಂಕನಗೌಡನ ಮನೆಯ ಮುಂದೆ ವೆಂಕನಗೌಡ S/o ಭೀಮನಗೌಡನೊಂದಿಗೆ ನಡೆದಿರುತ್ತದೆ.

ಸಿದ್ದಪ್ಪ ಸತರದ್ಧಿ ಗಂಗವ್ವಳನ್ನು ಮದುವೆ ಮಾಡಿಕೊಳ್ಳುವ ಯಾವುದೇ ಸಂದರ್ಭ ಒದಗಿ ಬಂದಿರುವುದಿಲ್ಲ. ವಾಸ್ತವವಾಗಿ, ಸಿದ್ದಪ್ಪ ಸತರದ್ಧಿ ಮತ್ತು ಪ್ರತಿವಾದಿ ಸಂಖ್ಯೆ 3 ಗಂಗವ್ವ ಇವರ ನಡುವೆ ಯಾವುದೇ ವಿವಾಹವಾಗಿರುವುದಿಲ್ಲ. ವಾದಿಯು, ಪ್ರತಿವಾದಿ ಸಂಖ್ಯೆ 3 ರೊಂದಿಗೆ ನಡೆದಿರುವ ಮದುವೆಯ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಮತ್ತು ವಾದ ಪತ್ರದಲ್ಲಿ ಮೃತ ಸಿದ್ದಪ್ಪ ತಪ್ಪಾಗಿ ವಾದಿಸಿರುವುದಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಆಧಾರವನ್ನು ಒದಗಿಸಬೇಕಾಗಿರುತ್ತದೆ. ದಾವಾ ಸ್ವತ್ತನ್ನು ಲಪಟಾಯಿಸುವ ದೃಷ್ಟಿಯಿಂದ, ವಾದಿಯು ಸುಳ್ಳು ದೂರನ್ನು ದಾಖಲಿಸಿ ಕಟ್ಟು ಕತೆಯನ್ನು ಹೇಳಿ, ಮೋಸದಿಂದ ಸ್ವತ್ತನ್ನು ಪಡೆದುಕೊಳ್ಳಲು ಪ್ರಯತ್ನಿಸಿರುತ್ತಾನೆ. ಸಿದ್ದಪ್ಪ ಸತರದ್ಧಿಯವರೊಂದಿಗೆ ವಾದಿಗೂ ಮತ್ತು ಆತನ ಕುಟುಂಬದ ಸದಸ್ಯರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಮತ್ತು ಆತನಿಗೆ ಇದ್ದದ್ದು, ದಿವಂಗತ ಸುಶೀಲವ್ವ

ಸತರದ್ಧಿ ಎಂಬ ಒಬ್ಬಳೇ ಹೆಂಡತಿ ಮೇಲಿನ ದಾವ ಅನುಸೂಚಿ 'ಎ' ಸ್ವತ್ತುಗಳು, 1979ಕ್ಕೂ ಮುಂಚೆ, ದಿವಂಗತ ಸುಶೀಲವ್ವಳ ಸ್ವಂತ ತಂದೆ ಗೋವಿಂದಪ್ಪ S/o ಭೀಮಪ್ಪ ನಿಂಗಪ್ಪನವರ್ ರವರಿಂದ ನೀಡಲಾದುದಾಗಿರುತ್ತದೆ. ಅಲ್ಲದೆ, ಹಿರೆಕೊಪ್ಪ ಗ್ರಾಮದ 12 ಎಕರೆ ಅಳತೆಯ ಆರ್.ಎಸ್.ಸಂಖ್ಯೆ 21/2ನ್ನು ಹೊಂದಿರುವ ಸ್ವತ್ತನ್ನು ಕೂಡ, ಶ್ರೀಮತಿ ಸುಶೀಲವ್ವಳಿಗೆ ಸಿದ್ದಪ್ಪ ಸತರದ್ಧಿ ದಾನ ನೀಡಿದ್ದು, ಅದೂ ಕೂಡ ಆಕೆಯ ಸ್ವಂತ ಸ್ವತ್ತೇ ಆಗಿರುತ್ತದೆ. ಈ ಸ್ವತ್ತಿನ ಸಂಬಂಧದಲ್ಲಿ ಸುಶೀಲವ್ವಳ ನಿರುಪಾಧಿಕ ಸ್ವಾಮ್ಯವನ್ನು ಪ್ರಶ್ನಿಸಲು ಯಾರೇ ಇತರ ವ್ಯಕ್ತಿಗೆ ಯಾವುದೇ ಹಕ್ಕು, ಸ್ವಾಮ್ಯ, ಹಿತಾಸಕ್ತಿ ಇರುವುದಿಲ್ಲ. ಆದ್ದರಿಂದ, ಶ್ರೀಮತಿ ಸುಶೀಲವ್ವ, 1982ರಲ್ಲಿ ಸದರಿ ಸ್ವತ್ತನ್ನು ಗದಗ ಜಿಲ್ಲೆಯ, ನರಗುಂದ ತಾಲೂಕಿನಲ್ಲಿನ ಹಿರೆಕೊಪ್ಪದ ತಿಮ್ಮಾರೆಡ್ಡಿ, ವೆಂಕರಡ್ಡಿಯವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾಳೆ. ಆದ್ದರಿಂದ, ವಾದಿ, ಪ್ರತಿವಾದಿ ಸಂಖ್ಯೆ 3 ಮತ್ತು ಪ್ರತಿವಾದಿ ಸಂಖ್ಯೆ 4 ರವರುಗಳು ದಿವಂಗತ ಸಿದ್ಧಪ್ಪ ಸತರದ್ಧಿ ಮತ್ತು ಆತನ ಪತ್ನಿ ಸುಶೀಲವ್ವಳ ಕುಟುಂಬಕ್ಕೆ ಅಪರಿಚಿತರಾಗಿರುತ್ತಾರೆ. 25.05.2008ರಂದು ಮೃತ ಸಿದ್ಧಪ್ಪ ರಾಮಪ್ಪ ಸತರದ್ಧಿ ಗದಗ ಜಿಲ್ಲೆಯ, ನರಗುಂದ ತಾಲೂಕಿನ, ಕುರುಗೋಪಿನಕೊಪ್ಪ ಗ್ರಾಮದಲ್ಲಿಯೂ ಮತ್ತು ಸುಶೀಲವ್ವ ಉರೂಫ್ ಸುಶೀಲ w/o ಸಿದ್ದಪ್ಪ, ದಿನಾಂಕ 27.11.2010ರಂದು ಬಾಗಲಕೋಟೆ ಜಿಲ್ಲೆಯ, ಮುಧೋಳ್ ತಾಲೂಕಿನ ಗುಲಗಾಲ ಜಂಬಗಿ ಗ್ರಾಮದಲ್ಲಿ ಮೃತರಾಗಿರುತ್ತಾರೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಪ್ರತಿವಾದಿ ಸಂಖ್ಯೆ 3 ಗಂಗವ್ವ, ಗದಗ ಜಿಲ್ಲೆಯ, ನರಗುಂದ ತಾಲೂಕಿನ ಕುರಗೋವಿನಕೊಪ್ಪ ಗ್ರಾಮದಲ್ಲಿ 14.09.2996ರಂದು ಈಗಾಗಲೇ ಮೃತರಾಗಿದ್ದಾಗ್ಯೂ, ವಾದಿಯು ಸುಳ್ಳು ಕಾರಣವನ್ನು ಹೇಳಿ ಪ್ರತಿವಾದಿ ಸಂಖ್ಯೆ 3 ಎಂದು ಈ ದಾವೆಯಲ್ಲಿ ಆಕೆಯನ್ನು ಸೇರಿಸಿರುವುದು ಆಶ್ಚರ್ಯಕರ ಸಂಗತಿಯಾಗಿರುತ್ತದೆ. ವಾದಿಯು ನಿರ್ಮಲವಾದ ಮನಸ್ಥಿತಿಯಲ್ಲಿ

ಮಾನ್ಯ ನ್ಯಾಯಾಲಯಕ್ಕೆ ಅಪೀಲು ಬಂದಿರುವುದಿಲ್ಲ. ಮಾನ್ಯ ನ್ಯಾಯಾಲಯವು, ವಾದಿಯ ಈ ನಡತೆ ಕುರಿತಂತೆ ಗಂಭೀರ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಸುಶೀಲವ್ವ @ ಸುಶೀಲ ಪ್ರತಿವಾದಿ ಸಂಖ್ಯೆ 2ರ ಹೆಸರಿನಲ್ಲಿ ಅಂದರೆ ಸೋಮಪ್ಪ S/o ಬಸಪ್ಪ ಹೊಟ್ಟೆಪ್ಪನವರ್ ರವರ ಹೆಸರಿನಲ್ಲಿ ಯಾವುದೇ ಸಮಯದಲ್ಲಿ ಉಯಿಲನ್ನು ಬರೆಯದ ಕಾರಣ ವಾದಿಯು, ಪ್ರತಿವಾದಿ ಸಂಖ್ಯೆ 2ನ್ನು ಪಕ್ಷಕಾರರನ್ನಾಗಿ ಮಾಡಿರುವುದು ತಪ್ಪಾಗಿರುತ್ತದೆ. ಹೇಗಾದರೂ ದಾವಾ ಸ್ವತ್ತನ್ನು ಲಪಟಾಯಿಸಬೇಕೆಂದು ವಾದಿ ಮತ್ತು ಪ್ರತಿವಾದಿ ಸಂಖ್ಯೆ 2 ಇಬ್ಬರೂ ಷಾಮೀಲಾಗಿ ಪ್ರಯತ್ನಿಸಿರುತ್ತಾರೆ. ಮುಂದುವರೆದು, ನಿರ್ದಿಷ್ಟವಾಗಿ ಮತ್ತು ಪ್ರವರ್ಗೀಯವಾಗಿ ಪ್ರತಿವಾದಿ ಸಂಖ್ಯೆ 1, ಪ್ರತಿವಾದಿ ಸಂಖ್ಯೆ 2 ಮತ್ತು ಇವರ ಪ್ರತಿ ಕ್ಲೇಮಿನ, ಡಬ್ಲ್ಯೂ.ಎಸ್.ನ ವಾದಗಳನ್ನು ನಿರಾಕರಿಸಿರುತ್ತಾರೆ. ಡಬ್ಲ್ಯು.ಎಸ್.ನಲ್ಲಿ ಪ್ರತಿ ಕ್ಲೇಮಿನ ಬಗ್ಗೆ ಯಾವುದೇ ವಾದವಿರುವುದಿಲ್ಲ ಮತ್ತು ಪ್ರತೀ ಕ್ಲೇಮನ್ನು ಕಾಲಾವಕಾಶದಿಂದ ಪ್ರತಿಷೇಧಿಸಲಾಗಿರುತ್ತದೆ. ಇದಲ್ಲದಕ್ಕಿಂತ ಮಿಗಿಲಾಗಿ, ಸಹ ಪ್ರತಿವಾದಿಯ ವಿರುದ್ಧದ ಪ್ರತಿ ಕ್ಲೇಮು ಊರ್ಜಿತವಾಗಿರುವುದಿಲ್ಲ.

ದಾಖಲೆಯಲ್ಲಿರುವ ಇಡೀ ವಿಷಯವನ್ನು ಪರಿಗಣಿಸಿ, ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿ – 1 ರ ಲಿಖಿತ ಹೇಳಿಕೆಯ ಪರಿಶೀಲನೆಯ ಮೇಲೆ ಮತ್ತು ಪ್ರಸ್ತಾಪಿತ ತಿದ್ದುಪಡಿಯ ಮೇಲೆ, ಪ್ರತಿವಾದಿ 3 ಗಂಗಪ್ಪ, ಸಿದ್ದಪ್ಪ ಸತರದ್ಧಿಯ ಎರಡನೇ ಹೆಂಡತಿಯಾಗಿರುತ್ತಾಳೆಂದು ಲಿಖಿತ ಹೇಳಿಕೆಯಲ್ಲಿ ಈಗಾಗಲೇ ಪ್ರತಿವಾದಿ–1 ಒಪ್ಪಿಕೊಂಡಿದ್ದಾರೆಂಬುದು ತಿಳಿದು ಬಂದಿರುತ್ತದೆಂಬ ಪರಿಶೀಲನಾಂಶವನ್ನು ದಾಖಲಿಸಿರುತ್ತದೆ.

11. ಇಡೀ ಲಿಖಿತ ಹೇಳಿಕೆಯ ಪರಿಶೀಲನೆಯ ಮೇಲೆ, ಸಿದ್ದಪ್ಪ ಮತ್ತು ಗಂಗವ್ವರ ನಡುವಿನ ಸಂಬಂಧವನ್ನು ಒಪ್ಪಿಕೊಳ್ಳಲಾಗಿದೆಯೆಂಬುದನ್ನು ಇದು ನಿರೂಪಿಸುತ್ತದೆ. ಆದಾಗ್ಯೂ, ಪ್ರಸ್ತಾಪಿತ ತಿದ್ದುಪಡಿಯ ಪರಿಶೀಲನೆಯು ಪ್ರತಿವಾದಿ–1, ಲಿಖಿತ ಹೇಳಿಕೆಯಲ್ಲಿ ಆಕೆ ಮಾಡಿರುವ ಸದರಿ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳಲು ಬಯಸಿರುವುದನ್ನು ಮತ್ತು ಗಂಗವ್ವ ಮತ್ತು ಸಿದ್ದಪ್ಪ ಸತರದ್ಧಿ ನಡುವಿನ ಸಂಬಂಧವನ್ನು ಕುರಿತಂತೆ ಆಕೆ ಮಾಡಿದ ನಿವೇದನೆಯನ್ನು ಇಲ್ಲದಂತೆ ಮಾಡಲು ಬಯಸಿರುವುದನ್ನು ಬಹಿರಂಗಪಡಿಸುತ್ತದೆ ಮತ್ತು ತಿದ್ದುಪಡಿಗೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯು, ಈ ಮೊದಲು ಮಾಡಿಕೊಂಡಿರುವ ನಿವೇದನೆಗಳನ್ನು ಹಿಂದಕ್ಕೆ ಪಡೆದುಕೊಂಡು ಹೊಸ ಅಂಶಗಳನ್ನು ಸೇರಿಸುವುದು ಅಗಿರುತ್ತದೆಯೇ ಹೊರತು ಬೇರೆನಲ್ಲ. ಆದರೆ ಇವು ಪ್ರತಿವಾದಿ–1 ಮುಂದಿಟ್ಟಿರುವ ವಾದದಲ್ಲಿ ಭರವಸೆಯನ್ನು ಗಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದರ ಜೊತೆಗೆ, ಪಕ್ಷಕಾರರ ಸಾಕ್ಷ್ಯವು, 22.05.2012ರಂದು ಇದ್ದಂತೆ ಈ ಹಿಂದೆ ಇದ್ದಂತೆಯೇ ಆರಂಭ ಮಾಡಲಾಗಿರುತ್ತದೆ ಮತ್ತು ವಾದಿಯನ್ನು ಪಿ.ಡಬ್ಲ್ಯು.1 ಎಂದು ಈಗಾಗಲೇ ಪರೀಕ್ಷಿಸಲಾಗಿರುತ್ತದೆ ಮತ್ತು ಹಲವಾರು ದಸ್ತಾವೇಜುಗಳನ್ನು ಗುರುತಿಸಲಾಗಿರುತ್ತದೆ ಮತ್ತು ಪಿ.ಡಬ್ಲ್ಯೂ.1ರ ಪಾಟೀ ಸವಾಲಿಗೆ ಸಂಬಂಧಿಸಿದಂತೆ ಪ್ರಕರಣವನ್ನು ನಿಯೋಜಿಸಲಾಗಿರುತ್ತದೆ.

12. ವಾಸ್ತವಾಂಶಗಳಲ್ಲಿ ಯಾವುದೇ ವಿವಾದವಿರುವುದಿಲ್ಲ. ಈ ಮೊದಲು, ಪ್ರತಿವಾದಿ–1, ಗಂಗವ್ವ – ಪ್ರತಿವಾದಿ 3, ಸುಭಾಷ್ (ವಾದಿ) ಮತ್ತು ಶ್ರೀದೇವಿ (ಪ್ರತಿವಾದಿ–4) ರವರುಗಳನ್ನು ಒಳಗೊಂಡಂಥ ವಾದಪತ್ರದ 2ನೇ ಪ್ಯಾರಾದಲ್ಲಿ ಹೇಳಿರುವ ವಂಶವೃಕ್ಷವನ್ನು ಒಪ್ಪಿಕೊಂಡಿರುತ್ತಾನೆ. ಅವರು ಸಿದ್ದಪ್ಪ ರಾಮಪ್ಪ ಸತರದ್ಧಿಯ ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಲಿಖಿತ ಹೇಳಿಕೆಯಲ್ಲಿ, 1ನೇ ಪ್ರತಿವಾದಿಯು, ಸಿದ್ದಪ್ಪ ರಾಮಪ್ಪ ಸತರದ್ಧಿಯು ಪ್ರತಿವಾದಿ–3 ಗಂಗವ್ವಳನ್ನು ತನ್ನ ಎರಡನೇ ಪತ್ನಿಯಾಗಿ ಮದುವೆ ಮಾಡಿಕೊಂಡಿರುತ್ತಾನೆಂದು ಒಪ್ಪಿಕೊಂಡಿರುತ್ತಾನೆ. ಅವರ ಮದುವೆಯಾದ ತರುವಾಯ, ವಾದಿ ಮತ್ತು ಪ್ರತಿವಾದಿ – 4 ರವರುಗಳು ಹುಟ್ಟಿರುತ್ತಾರೆ. ಲಿಖಿತ ಹೇಳಿಕೆಯ ತಿದ್ದುಪಡಿಯ ರೂಪದಲ್ಲಿ,

11(ಎ) ಪ್ಯಾರಾದಲ್ಲಿ ಪ್ರತಿವಾದಿ–1, ಶ್ರೀಮತಿ ಸುಶೀಲವ್ವ ಉರೂಫ್ ಸುಶೀಲ ಮಾತ್ರವೇ ಸಿದ್ದಪ್ಪ ರಾಮಪ್ಪ ಸತರದ್ಧಿಯನ್ನು ಕಾನೂನುಬದ್ಧವಾಗಿ ಮದುವೆ ಮಾಡಿಕೊಂಡ ಪತ್ನಿಯೆಂಬ ವಾಸ್ತವಾಂಶವನ್ನು ಸ್ಪಷ್ಟವಾಗಿ ಹೇಳಲು ಇಚ್ಛಿಸಿರುತ್ತಾನೆ. ಮೃತ ಗಂಗವ್ವ ಪ್ರತಿವಾದಿ–3 ವಾದಿಯ ತಾಯಿಯಾಗಿರುತ್ತಾಳೆ ಮತ್ತು ಪ್ರತಿವಾದಿ ಸಂಖ್ಯೆ 4 ಸಿದ್ಧಪ್ಪ ರಾಮಪ್ಪ ಸತರದ್ಧಿಯ ಎರಡನೇ ಪತ್ನಿಯಾಗಿರುವುದಿಲ್ಲ. ಗಂಗವ್ವಳ ಮದುವೆಯು, ಬೆಳಗಾಂ ಜಿಲ್ಲೆಯ, ಸೌಂದತ್ತಿ ತಾಲೂಕಿನ, ಖಾಗ್ದಾಲ್ ಗ್ರಾಮದಲ್ಲಿನ ವೆಂಕನಗೌಡನ ಮನೆಯ ಮುಂದೆ 1956ರಲ್ಲಿ ವೆಂಕನಗೌಡ S/o ಭೀಮನಗೌಡ ಪಾಟೀಲ್‌ನೊಂದಿಗೆ ನಡೆದಿರುತ್ತದೆ. ಆಕೆಯ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿ ಸಂಖ್ಯೆ 1 ಸಿದ್ದಪ್ಪ ರಾಮಪ್ಪ ಸತರದ್ಧಿ, ಗಂಗವ್ವಳನ್ನು ಮದುವೆ ಮಾಡಿಕೊಳ್ಳುವ ಯಾವುದೇ ಸಂದರ್ಭ ಉದ್ಭವಿಸಿರುವುದಿಲ್ಲ. ವಾಸ್ತವವಾಗಿ ಸಿದ್ದಪ್ಪ ರಾಮಪ್ಪ ಸತರದ್ಧಿಯೊಂದಿಗೆ ಪ್ರತಿವಾದಿ ಸಂಖ್ಯೆ 3 ಗಂಗವ್ವಳ ಮದುವೆ ನಡೆದಿರುವುದಿಲ್ಲ ಮತ್ತು ಅನುಸೂಚಿತ ಸ್ವತ್ತನ್ನು ಲಪಟಾಯಿಸಲು ವಾದಿಯು ಸುಳ್ಳು ವಾದ ಪತ್ರವನ್ನು ಸಲ್ಲಿಸಿರುತ್ತಾನೆಂದು ಪ್ರವರ್ಗೀಯವಾಗಿ ನಿರೂಪಿಸಿರುತ್ತಾನೆ.

ಅಲ್ಲದೆ, ಲಿಖಿತ ಪತ್ರದಲ್ಲಿ, ಯಾರೇ ಇತರ ವ್ಯಕ್ತಿಯು, ದಾವಾ ಸ್ವತ್ತುಗಳ ಸಂಬಂಧದಲ್ಲಿ ಸುಶೀಲವ್ವಳ ನಿರುಪಾಧಿಕ ಸ್ವಾಮ್ಯವನ್ನು ಪ್ರಶ್ನಿಸುವ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಹೊಂದಿರುವುದಿಲ್ಲವೆಂದು ಹೇಳಲಾಗಿರುತ್ತದೆ. ಆದ್ದರಿಂದ, ಶ್ರೀಮತಿ ಸುಶೀಲವ್ವ, 1982ರಲ್ಲಿ ಗದಗ ಜಿಲ್ಲೆಯ, ನರಗುಂದ ತಾಲೂಕಿನಲ್ಲಿನ ಹಿರೇಕೊಪ್ಪದ ತಿಮ್ಮಾರೆಡ್ಡಿ ವೆಂಕಾರೆಡ್ಡಿ ಸೋಮಪುರ್‌ಗೆ ಸದರಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಆದ್ದರಿಂದ ವಾದಿ ಮತ್ತು ಪ್ರತಿವಾದಿ 3 ಹಾಗೂ ಪ್ರತಿವಾದಿ 4 ರವರುಗಳು ಸಿದ್ಧಪ್ಪ ಸತರದ್ಧಿಯ ಕುಟುಂಬಕ್ಕೆ ಸಂಪೂರ್ಣವಾಗಿ ಹೊರಗಿನವರಾಗಿರುತ್ತಾರೆ.

13. ವಾದಿಯ ಸ್ವಾಮ್ಯದ ಘೋಷಣೆಗಾಗಿ ಮತ್ತು ಪ್ರಶ್ನಿತ ದಾವಾ ಸ್ವತ್ತಿನ ಸಂಬಂಧದಲ್ಲಿ 3 ಮತ್ತು 4ನೇ ಪ್ರತ್ಯರ್ಜಿದಾರರು ದಾವೆಯನ್ನು ಸಲ್ಲಿಸಿರುತ್ತಾರೆ. ಇದು, ಪ್ರಕರಣದ ಅರ್ಹತೆಗಳನ್ನು ಆಧರಿಸಿ, ಆತನ ಸ್ವಾಮ್ಯವನ್ನು ಸುಸ್ಥಾಪಿಸಲು,

ವಾದಿಗೆ ಸಂಬಂಧಿಸಿರುವುದಾಗಿರುತ್ತದೆ. ಪ್ರತ್ಯರ್ಜಿದಾರ ಸಂಖ್ಯೆ 1 ಕೋರಿರುವಂತೆ ಲಿಖಿತ ಹೇಳಿಕೆಯ ತಿದ್ದುಪಡಿ ಮಾಡುವುದೆಂದರೆ ಹೊಸ ಪ್ರಕರಣವನ್ನು ದಾಖಲಿಸುವುದಿಲ್ಲದೆ ಬೇರೆ ಆಗಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಲಿಖಿತ ಹೇಳಿಕೆಯ ತಿದ್ದುಪಡಿಯನ್ನು ಪರಿಗಣಿಸುವಾಗ, ವಿಶೇಷವಾಗಿ, ***ಮೋದಿ ಸ್ಪಿನಿಂಗ್ ಅಂಡ್ ವೀವಿಂಗ್ ಮಿಲ್ಸ್, ಕಂ.ಲಿ., –ವಿರುದ್ಧ– ಲಧಾ ರಾಮ್ ಮತ್ತು ಕಂಪನಿ***[1]**,** ಪ್ರಕರಣವನ್ನು ಉದಾಹರಿಸುತ್ತದೆ. ಅದು ಈ ಮುಂದಿನಂತಿರುತ್ತದೆ:

> “ಪ್ರತಿವಾದಿ ತಿದ್ದುಪಡಿಯ ರೂಪದಲ್ಲಿ, ಸಂಪೂರ್ಣವಾಗಿ ಬೇರೆ ಪ್ರಕರಣವನ್ನು ದಾಖಲಿಸಲು ಬಯಸಿರುತ್ತಾನೆ. ವಾಸ್ತವಾಂಶಗಳು ಮತ್ತು ಸದರಿ ಸಂದರ್ಭಗಳಲ್ಲಿ, ಪ್ರತಿವಾದಿಗಳು ಅವರ ಲಿಖಿತ ಹೇಳಿಕೆಯಲ್ಲಿ ಅವರು ಪ್ರಕರಣವನ್ನು ರೂಪಿಸಿರುವಂತೆ ಮತ್ತು ಸಂಪೂರ್ಣವಾಗಿ ಒಂದು ಹೊಸ ಪ್ರಕರಣದಂತೆ ಈ ಮೊದಲ ಪ್ರಕರಣಕ್ಕೆ ಬದಲಾಗಿ ಪ್ರತಿಯೋಜಿಸಲು ಸಂಪೂರ್ಣವಾಗಿ ಬದಲಾಯಿಸಲು ಅನುಮತಿಸಲಾಗುವುದಿಲ್ಲ ಮತ್ತು ಅಂಥ ತಿದ್ದುಪಡಿಗಳನ್ನು ಒಪ್ಪಿಕೊಂಡಲ್ಲಿ, ವಾದಿಗಳಿಗೆ ಪ್ರತಿವಾದಿಗಳಿಂದ ಒಪ್ಪಿಗೆಯನ್ನು ಪಡೆಯುವ ಅವಕಾಶವನ್ನು ನಿರಾಕರಿಸಿದರೆ ಅಪರಿಹಾರ ಪೂರ್ವಕವಾದ ಹಾನಿಯುಂಟು ಮಾಡಿದಂತಾಗುತ್ತದೆ”.

14. ***ಹಿರಾಲಾಲ್ –ವಿರುದ್ಧ– ಕಯಾಲನ್ ಮಾಲ್ ಮತ್ತು ಇತರರು***[2], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> “ವಾದಿಯ ಹೆಸರಿನಲ್ಲಿ, ಒಮ್ಮೆ ಲಿಖಿತ ಹೇಳಿಕೆಯನ್ನು ಪಡೆದು, ಪ್ರಕರಣವನ್ನು ದಾಖಲಿಸಿಕೊಂಡಿದಲ್ಲಿ, ಪ್ರತಿವಾದಿಗಳ ಅಂಥ ಒಪ್ಪಿತ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ ಮತ್ತು ಅಂಥ ಹಿಂತೆಗೆದುಕೊಳ್ಳುವಿಕೆಯು,

1. ಎಐಆರ್ 1988 ಎಸ್.ಸಿ.680
2. ಎಐಆರ್ 1998 ಎಸ್.ಸಿ.618

ವಾದಿಯು ಅಪರಿಹಾರ ಪೂರ್ವಕವಾದ ಹಾನಿಯುಂಟು ಮಾಡಬಹುದಾದಂಥ ವಾದಿಯ ಪ್ರಕರಣವನ್ನು ಸಂಪೂರ್ಣವಾಗಿ ಸ್ಥಳಾಂತರಿಸಲು ಕಾರಣವಾಗುತ್ತದೆ".

ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಬಿ.ಕೆ. ನಾರಾಯಣ ಪಿಳ್ಳೈ ಮತ್ತು ಪರಮೇಶ್ವರನ್ ಪಿಳ್ಳೈ ಮತ್ತು ಮತ್ತೊಬ್ಬರು***[3], ಪ್ರಕರಣದಲ್ಲಿ, ಈ ಮುಂದಿನಂತೆ ಅಭಿಪ್ರಾಯ ಪಟ್ಟಿರುತ್ತದೆ:

"ಪ್ರತಿವಾದಿಯು, ತಿದ್ದುಪಡಿಯ ಮೂಲಕ ತನ್ನ ರಕ್ಷಣೆಗಾಗಿ ಪರ್ಯಾಯ ವಾದಗಳನ್ನು ಮಂಡಿಸಲು ಹಕ್ಕನ್ನು ಹೊಂದಿದ್ದಾಗ್ಯೂ, ಇದು (i) ಪ್ರಸ್ತಾವಿತ ತಿದ್ದುಪಡಿಯು, ಮತ್ತೊಂದು ಕಡೆ ಅನ್ಯಾಯಕ್ಕೆ ದಾರಿ ಮಾಡಿಕೊಡುತ್ತದೆ; (ii) ವಾದಿಯ ಹೆಸರಿನಲ್ಲಿ ಮಾಡಿದ ಒಪ್ಪಿಗೆಯನ್ನು ಹಿಂದಕ್ಕೆ ಪಡೆಯಲಾಗುವುದಿಲ್ಲ; ಮತ್ತು (iii) ಒಪ್ಪಿತ ವಾಸ್ತವಾಂಶಗಳನ್ನೂ ಇಲ್ಲದಂತಾಗಿಸುವ ಅಸಂಗತ ಮತ್ತು ವೈರುದ್ಯದ ಅಪಾದನೆಗಳನ್ನು ಪ್ರಸ್ತಾಪಿಸಿರುವುದಿಲ್ಲ ಎಂಬ ಅಂಶಗಳಿಗೆ ಒಳಪಟ್ಟಿರುತ್ತದೆ."

ಪ್ರಸ್ತುತ ಪ್ರಕರಣದಲ್ಲಿ, ಮೂಲ ಲಿಖಿತ ವಿವರಪಟ್ಟಿಯಲ್ಲಿ ರೂಪಿಸಿದ ಒಪ್ಪಿಗೆ ಮತ್ತು 11(ಎ) ಪ್ಯಾರಾವನ್ನು ಪರಿಚಯಿಸುವ ಮೂಲಕ ಕೋರಿದ ತಿದ್ದುಪಡಿ, ಮೂಲ ಲಿಖಿತ ಹೇಳಿಕೆಯ 2 ಮತ್ತು 3ನೇ ಪ್ಯಾರಾಗಳಲ್ಲಿ ಮಾಡಿರುವ ತನ್ನ ಒಪ್ಪಿತ ಹೇಳಿಕೆಗಳಿಂದ 1ನೇ ಪ್ರತಿವಾದಿಯು ದೂರಬರಲು ಇಚ್ಛಿಸಿರುತ್ತಾನೆಂಬುದು ಸೂಚಿತವಾಗಿರುತ್ತದೆ ಮತ್ತು ಲಿಖಿತ ಹೇಳಿಕೆಯಲ್ಲಿ, 3ನೇ ಪ್ರತಿವಾದಿಯ ಮತ್ತು ವಾದಿಯ ಮತ್ತು 4ನೇ ಪ್ರತಿವಾದಿಯ ಸಂಬಂಧವನ್ನು ಒಪ್ಪಿಕೊಂಡಿರುತ್ತಾನೆ ಮತ್ತು ಇದನ್ನು ತಿದ್ದುಪಡಿಯ ಮೂಲಕ ಖಡಾಖಂಡಿತವಾಗಿ ನಿರಾಕರಿಸುತ್ತಾ, ವಾದಿ, ಪ್ರತಿವಾದಿ – 3 ಮತ್ತು 4 ಸಿದ್ದಪ್ಪ ಸತರದ್ದಿಯ ಕುಟುಂಬಕ್ಕೆ ತೀರಾ

3. (2000)1 ಎಸ್‌ಸಿಸಿ 712

ಅಪರಿಚಿತ ವ್ಯಕ್ತಿಗಳೆಂದು ನಿರ್ದಿಷ್ಟವಾಗಿ ಹೇಳಿರುತ್ತಾರೆ. ಇದು ಪ್ರತಿವಾದಿ 1 ಹೊಸ ಪ್ರಕರಣವನ್ನು ಸಲ್ಲಿಸಲು ಮತ್ತು ಮೂಲ ಲಿಖಿತ ಹೇಳಿಕೆಯಲ್ಲಿ ಒಪ್ಪಿಕೊಂಡಿರುವುದನ್ನು ಹಿಂತೆಗೆದುಕೊಳ್ಳಲು ಇಚ್ಛಿಸಿರುತ್ತಾನೆಂಬುದು ಸ್ಪಷ್ಟವಾಗಿ ನಿರೂಪಿಸುತ್ತದೆ. ಆದರೆ ಇದು ಅನುಮತೀಯವಾಗಿರುವುದಿಲ್ಲ.

15. ಮಾನ್ಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು, ದಾಖಲೆಯ ಮೇಲಿರುವ ಇಡೀ ಅಭಿಪ್ರಾಯದ ಮೇಲೆ, 1ನೇ ಪ್ರತ್ಯರ್ಜಿದಾರರು ಕೋರಿದ ತಿದ್ದುಪಡಿಯನ್ನು ನಿರಾಕರಿಸಿರುತ್ತಾರೆ ಮತ್ತು ಇದು ಕಾನೂನಿಗನುಸಾರವಾಗಿರುತ್ತದೆ. ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ಪ್ರಶ್ನಿತ ಆದೇಶಗಳೊಂದಿಗೆ ಮಧ್ಯೆ ಪ್ರವೇಶಿಸಲು ಯಾವುದೇ ಆಧಾರಗಳಿರುವುದಿಲ್ಲ.

ತದನುಸಾರವಾಗಿ, ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.